


ರಾಜ ತನ್ನ ಮುಂದಿನ ಆಜ್ಞೆಯಲ್ಲಿ 'ಈ ಸುವರ್ಣ ದೇಶದ ಜನಗಳ ಹೆಸರಿಗೆ ಕಳಂಕ ತರುವಂತಹ ಕೃತ್ಯ ಎಸಗುತ್ತಿರುವವರು ಯಾರು?' ಎಂದು ಪ್ರಶ್ನಿಸಿದ. ನಂತರ ಮುಂದುವರೆದು ರಾಜ ಹೇಳಿದ: '... ಇವರೆಲ್ಲ ಹಿಂದಿನ ರಾಜನ ಚಾಡಿಕೋರರಾಗಿದ್ದಾರೆ. ಈಗಿನ ರಾಜ ಚಾಡಿಕೋರತನಕ್ಕೆ ಅವಕಾಶ ನೀಡುತ್ತಿಲ್ಲದ ಕಾರಣದಿಂದ ನನ್ನ ಪ್ರೀತಿಯ ಜನರ ಹಾಗೂ ದೇಶದ ಹೆಸರಿಗೆ ಮಸಿ ಬಳಿಯುತ್ತಿದ್ದಾರೆ. ಆದರೆ ಜನರು ಇದನ್ನು ಹೆಚ್ಚು ಸಮಯ ಸಹಿಸಿಕೊಳ್ಳುವುದಿಲ್ಲ. ಅಂಥವರನ್ನು ನನ್ನ ದೇಶದ ಜನ ಮಣ್ಣುಮುಕ್ಕಿಸಿಬಿಡುತ್ತಾರೆ ಎಂದು ಆ ಕವಿಗಳು ಅರ್ಥಮಾಡಿಕೊಳ್ಳಬೇಕು...'

ಮರುದಿನದಿಂದಲೇ ಕವಿಗಳ ಮೇಲೆ ದಾಳಿಗಳು ಶುರುವಾದವು. ಈ ದಾಳಿಗಳಿಗೆ ಕವಿಗಳೇ ಕಾರಣರು ಎಂದು ರಾಜ ಪ್ರಚುರ ಪಡಿಸಿದ. ಆದರೂ ಈ ದಾಳಿಗಳನ್ನು ರಾಜ ಖಂಡಿಸುತ್ತಾ ಪ್ರಜೆಗಳು ಶಾಂತಿ ಕಾಪಾಡಬೇಕೆಂದು ವಿನಂತಿಸಿದ. ರಾಜನ ಈ ವಿನಂತಿಯ ಹೊರತಾಗಿಯೂ ಕವಿಗಳ ಮೇಲೆ ದಾಳಿಗಳು ನಿಲ್ಲಲಿಲ್ಲ. ಪ್ರತೀವಾರ ಒಂಬತ್ತು ಕವಿಗಳ ಹತ್ಯೆ ಮಾಡಲಾಯಿತು. ಇದರಿಂದ ದೇಶದಲ್ಲಿ ಗೊಂದಲ ಪ್ರಾರಂಭವಾಯಿತು. ಜನರು ಸಹ ಕವಿಗಳ ಹತ್ಯೆಯನ್ನು ಇಷ್ಟಪಡಲಿಲ್ಲ.

ರಾಜ ವಿದೇಶದಿಂದ ಹಿಂತಿರುಗಿದ ಕೂಡಲೇ ಕವಿಗಳ ಮೇಲಿನ ಹಲ್ಲೆಯನ್ನು ಕಟುವಾಗಿ ನಿಂದಿಸಿ ಎಲ್ಲಾ ವಿರೋಧಿ ಕವಿಗಳಿಗೆ ರಕ್ಷಣೆ ಒದಗಿಸುವಂತೆ ಪ್ರಕಟಣೆ ಹೊರಡಿಸಿದ. ಇದರೊಂದಿಗೆ ಸುವರ್ಣ ದೇಶದ ಶಾಂತಿಯನ್ನು ಕಾಪಾಡುವಲ್ಲಿ ಕವಿಗಳ ಜವಾಬ್ದಾರಿ ಕೂಡ ಇದೆ ಎಂದು ಹೇಳಿಕೆ ನೀಡಿದ. ಎಲ್ಲಾ ಪ್ರಮುಖ ಪ್ರಸಿದ್ಧ ಕವಿಗಳ ಸುರಕ್ಷತೆಯನ್ನು ಜಾಸ್ತಿ ಮಾಡಬೇಕೆಂದು ಸೂಚಿಸಿದ. ಇದರಿಂದಾಗಿ ಸೈನಿಕರು ಸುರಕ್ಷತೆ ದೃಷ್ಟಿಯಿಂದ ಕವಿಗಳನ್ನು ಒಂಟಿಯಾಗಿರಲು ಬಿಡುತ್ತಲೇ ಇರಲಿಲ್ಲ.

ಸದಾ ಬಂದೂಕುಧಾರಿಗಳ ಮಧ್ಯೆ ದಿನ ಕಳೆಯುವ ಅಭ್ಯಾಸ ಕವಿಗಳಿಗೆ ಇರಲಿಲ್ಲ. ಅವರು ಕವಿತೆ ಬರೆಯುತ್ತಿದ್ದರೆ, ಸೈನಿಕರು ಗುಂಡು ಹಾರಿಸುವ ಅಭ್ಯಾಸ ನಡೆಸುತ್ತಿದ್ದರು. ಕವಿಗಳು ಕಣ್ಣು ಮುಚ್ಚಿ ನೋವಿನ ನದಿಯಲ್ಲಿ ಮುಳುಗೇಳುತ್ತಿದ್ದರೆ, ಇತ್ತ ಸೈನಿಕರು ರಾಜನಿಗೆ ಪ್ರಿಯವಾದ ಕವಿತೆಗಳ ಪಠಣ ಪ್ರಾರಂಭಿಸಿ ಬಿಡುತ್ತಿದ್ದರು. ಕವಿಗಳು ಲೇಖನಿಗಳನ್ನು ಕಾಗದದ ಮೇಲೆ ಇಟ್ಟ ತಕ್ಷಣ ಗುಂಡಿನ 'ಧಾಂಯ್' ಶಬ್ದದಿಂದ ಲೇಖನಿಗಳು ಹಾರಿಹೋಗಬಿಡುತ್ತಿದ್ದವು. ಕವಿಗಳು ಸೈನಿಕರನ್ನು ದುರುಗುಟ್ಟಿ ನೋಡಿದರೆ ಸೈನಿಕರು ಇದೆಲ್ಲಾ ನಿಮ್ಮ ಸುರಕ್ಷತೆಗಾಗಿಯೇ ಕವಿವರ್ಯರೇ ಎಂದು ನಮ್ರವಾಗಿಯೇ ಹೇಳುತ್ತಿದ್ದರು.

ಇಷ್ಟಾಗಿಯೂ ಈ ಕವಿಗಳು ಕವಿತೆ ಬರೆಯುವುದನ್ನು ನಿಲ್ಲಿಸಲಾಗಲಿಲ್ಲ. ನಿರಂತರವಾಗಿ ಬೆಳೆಯುತ್ತಿರುವ ದುಃಖದ ಪರ್ವತಗಳ ಹಾಗೂ ಭಯಾನಕ ನೋವಿನ ನದಿಗಳ ವಿವರಣೆ ಇರುವ ಕವಿತೆಗಳು ನಿರಂತರವಾಗಿ ಹೊರಬರಲಾರಂಭಿಸಿದವು. ಹಾಗೇನೇ ರಾಜನ ನೈಜ ಚಿತ್ರಣವನ್ನು ಬಿಂಬಿಸುವ ಕವಿತೆಗಳು ಸಹ ಪ್ರಕಟವಾಗಲಾರಂಭಿಸಿದವು. ತನ್ನ ಚಿತ್ರಣವನ್ನು ಗಮನಿಸಿದಾಗ ರಾಜನ ಮುಖದ ಮೇಲೆ ಕ್ರೂರ ನಗು ಮೂಡುತ್ತಿತ್ತು. ತಾನು ಒಂಟಿಯಾಗಿ ಮಾಡಿದ ಕಾರ್ಯಗಳು ಹಾಗೂ ಯೋಚಿಸಿದ ವಿಚಾರಗಳು ಸಹ ಕವಿಗಳಿಗೆ ತಿಳಿದು ಕವಿತೆಯ ವಿಷಯಗಳಾಗುತ್ತಿರುವ ಪರಿಯನ್ನು ಕಂಡು ಆತ ಸಿಡಿಮಿಡಿಗೊಳ್ಳುತ್ತಿದ್ದ. ಆದರೂ ಕವಿತಾ ರಚನೆಯನ್ನು ನಿರ್ಬಂಧಿಸಲು ಆತನಿಂದ ಸಾಧ್ಯವಾಗುತ್ತಿರಲಿಲ್ಲ.

ಇಂತಿರುವಾಗ ಗೂಢಾಚಾರರ ಒಂದು ಸುದ್ದಿ ರಾಜ ಹೌಹಾರುವಂತೆ ಮಾಡಿತು. ಅದು ಹೀಗಿತ್ತು: ರಾಜನ ಕಾವ್ಯಪ್ರೇಮ ಕೇವಲ ತೋರ್ಪಡಿಕೆಯ? ಆತ ಕಾವ್ಯಪ್ರೇಮದ ನಾಟಕ ಮಾಡುತ್ತಾ, ಪ್ರಜೆಗಳನ್ನು ಮೂರ್ಖರನ್ನಾಗಿಸುತ್ತಿದ್ದಾನೆ. ವಾಸ್ತವವಾಗಿ ಅವನಲ್ಲಿ ಕಾವ್ಯದ ಬಗ್ಗೆ ಆಸಕ್ತಿಯೇ ಇಲ್ಲ'. ಇದರಿಂದಾಗಿ ತಳಮಳಗೊಂಡ ರಾಜ ಗಂಭೀರವಾಗಿ ಯೋಚಿಸಿ ವಿಚಾರ–ವಿನಿಮಯ ಮಾಡಿದ ನಂತರ 'ಈ ಕವಿಗಳನ್ನು ಮತ್ತು ಅವರ ಕಾವ್ಯಗಳನ್ನು ನಿಯಂತ್ರಿಸಿದರೆ ಮಾತ್ರ ತಾನು ಉಳಿಯಲು ಸಾಧ್ಯ' ಎಂಬ ವಿಚಾರ ಹೊಳೆಯಿತು. ಮಾರನೆಯ ದಿನವೇ ರಾಜ ಪ್ರಜೆಗಳನ್ನು ಉದ್ದೇಶಿಸಿ ಹೇಳಿದ: '...ಈವರೆಗೆ ಕವಿಗಳನ್ನು ಕುರಿತಂತೆ ನಡೆದ ಕಹಿ ಘಟನೆಗಳು ದೌರ್ಭಾಗ್ಯಪೂರ್ಣವೇ ಸರಿ. ಇದರಿಂದ ನನ್ನ ಆತ್ಮವೂ ಗಾಸಿಗೊಂಡಿದೆ. ನಾನು ಕೂಡ ಆಂತರಿಕವಾಗಿ ಕಾವ್ಯಪ್ರೇಮಿಯೇ ಆಗಿರುವೆ. ನನ್ನೊಳಗೂ ಒಬ್ಬ ಕವಿ ಇದ್ದಾನೆ. ಈ ಸುವರ್ಣದೇಶದ ಕವಿ ಪರಂಪರೆಯನ್ನು ಗೌರವಿಸಿ, ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಇದಕ್ಕಾಗಿ ಒಂದು ಶಾಶ್ವತ ವ್ಯವಸ್ಥೆ ಮಾಡಬೇಕೆಂದು ನಾನು ಉದ್ದೇಶಿಸಿದ್ದೇನೆ. ಅದಕ್ಕಾಗಿ ಒಂದು ಪ್ರತ್ಯೇಕವಾದ ಕಾವ್ಯ ವಿಭಾಗವನ್ನು ತೆರೆಯಲು ನಿರ್ಧರಿಸಿದ್ದೇನೆ ಅದರ ಸಂಪೂರ್ಣ ಜವಾಬ್ದಾರಿಯನ್ನು ನಾನು ಈಗನಿಂದಲೇ ನಮ್ಮ ಗುಪ್ತಮಂತ್ರಿಯವರಿಗೆ ವಹಿಸಿ ಕೊಡುತ್ತಿದ್ದೇನೆ'.

ಹೀಗೆ ಘೋಷಿಸಿದ ಮೇಲೆ ಜನರ ಪ್ರತಿಕ್ರಿಯೆ ತಿಳಿಯಲು ಸ್ವಲ್ಪ ಹೊತ್ತು ರಾಜ ಹಾಗೆ ನಿಂತ. ನಂತರ ಮತ್ತೆ ಮಾತು ಮುಂದುವರಿಸುತ್ತಾ ರಾಜ ಹೇಳಿದ: 'ಈ ಹಿಂದೆ ನಡೆದ ಕೆಲವು ಅಪ್ರಿಯ ಘಟನೆಗಳಿಗೆ ಕವಿಗಳ ನಿರಂಕುಶತೆಯೇ ಕಾರಣ ಎಂಬುದನ್ನು ಕವಿಗಳು ಅರಿಯಬೇಕು. ಇದರಿಂದ ಮುಗ್ಧ ಜನತೆಯ ಭಾವನೆಗಳಿಗೆ ಗಾಸಿ ಉಂಟಾಗಿದೆ. ಕವಿತೆ ಎಂಬುದು ಒಂದು ಜವಾಬ್ದಾರಿಯ ಕೆಲಸ. ಅದನ್ನು ಬಹು ಎಚ್ಚರಿಕೆಯಿಂದ ನಿರ್ವಹಿಸಬೇಕು. ಅದಕ್ಕಾಗಿ ಭವಿಷ್ಯದಲ್ಲಿ ಇಂತಹ ಅಹಿತಕರ